Reg No:DRB4/SOR/224/2021-2022

# ಕರ್ನಾಟಕ ರಾಜ್ಯ ಖಾಸಗಿ ಶಾಲಾ ಕಾಲೇಜು ಪೋಷಕರ ಸಂಘಟನೆಗಳ ಸಮನ್ವಯ ವೇದಿಕೆ

#7 ಅನಂತ ಸ್ವಾಮಿ ಆಶ್ರಮ ಕಪಾಲಿ ಥಿಯೇಟರ್ ಹಿಂಭಾಗ ಗಾಂಧಿನಗರ ಬೆಂಗಳೂರು- 560 009

ದಿನಾಂಕ: ೦೬.೦೫.೨೦೨೨

## ಪತ್ರಿಕಾ ಹೇಳಿಕೆ

ರಾಜ್ಯದಲ್ಲಿ ಮೇ ೧೬ರಿಂದ ಶಾಲೆಗಳು ಪ್ರಾರಂಭವನ್ನು ಮುಂದೂಡಬೇಕೆಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ವಿಧಾನ ಪರಿಷತ್ತಿನ ಸಭಾಪತಿಗಳಾದ ಮಾನ್ಯ ಬಸವರಾಜ ಹೊರಟ್ಟಿಯವರ ಕ್ರಮವನ್ನು ನಮ್ಮ ಸಮನ್ವಯ ವೇದಿಕೆಯು ಬಲವಾಗಿ ಖಂಡಿಸುತ್ತದೆ. ಮಾನ್ಯ ಬಸವರಾಜ ಹೊರಟ್ಟಿಯವರು ತಮ್ಮ ಸಂವಿಧಾನಾತ್ಮಕ ಹುದ್ದೆಯನ್ನು ಬಳಸಿಕೊಂಡು ರಾಜ್ಯ ಸರ್ಕಾರ ಹಾಗು ಮುಖ್ಯ ಮಂತ್ರಿಯವರ ಮೇಲೆ ಪ್ರಭಾವ ಬೀರಿ ಕೋಟ್ಯಾಂತರ ಮಕ್ಕಳ ಶಿಕ್ಷಣ ಹಿತಾಸಕ್ತಿಯನ್ನು ಬಲಿಕೊಡುತ್ತಿರುವುದು ದುರದೃಷ್ಟಕರ .

ನಮಗೆಲ್ಲ ತಿಳಿದಿರುವಂತೆ ಕೋವಿಡ್ ಪ್ಯಾಂಡಮಿಕ್ ನಿಂದ ಎರಡು ವರ್ಷಗಳಿಂದ ಶಾಲೆಗಳು ದೀರ್ಘ ಕಾಲ ಮುಚ್ಚಿದ ಕಾರಣ ಮಕ್ಕಳ ಕಲಿಕೆಗೆ ಭಾರೀ ಹಿನ್ನೆಡಯಾಗಿದೆ . ನಮ್ಮ ದೇಶವೂ ಸೇರಿದಂತೆ ಜಗತ್ತಿನಾದ್ಯಂತ ನಡೆದಿರುವ ಸಂಶೋಧನೆಗಳು ಹಾಗು ಅಧ್ಯಯನಗಳು ಕಲಿಕೆಗೆ ಸಂಬಂಧಿಸಿದಂತೆ "ರಿಮೋಟ್ ಸ್ಕೂಲ್ ಕಲಿಕೆ ಉತ್ತಮವಾಗಿಲ್ಲ ಹಾಗು ಅದು ಮಕ್ಕಳಿಗೆ ಹೆಚ್ಚು ಪ್ರಯೋಜನವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ . ನಮ್ಮ ರಾಜ್ಯದಲ್ಲಿಯೂ ಸಹ ಮಕ್ಕಳ ಕಲಿಕೆಗೆ ಬಹಳ ಹಿನ್ನೆಡೆಯಾಗಿದ್ದು , ಇದು ತಲೆಮಾರುಗಳ ಮೇಲೆ ಪರಿಣಾಮ ಬೀರಬಹುದು ಎಂದು ಅಂದಾಜಿಸಲಾಗಿದೆ.

ಶಾಲೆಯ ಮುಚ್ಚಿದ ಕಾರಣ ಕಲಿಕೆಯಲ್ಲಿ ಈಗಾಗಲೇ ಇದ್ದ ಅಸಮಾನತೆ ಮತ್ತಷ್ಟು ವಿಸ್ತರಿಸಿದೆ ಎಂಬುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ಈ ಅಸಮಾನತೆ ಸರ್ಕಾರಿ ಹಾಗು ಅನುದಾನಿತ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಮೇಲೆ ಮತ್ತಷ್ಟು ದೀರ್ಘಕಾಲಿಕ ಪರಿಣಾಮ ಬೀರಿದೆ. "ಇದು ಬಹುಶಃ ಒಂದು ಪೀಳಿಗೆಯಲ್ಲಿ ಶೈಕ್ಷಣಿಕ ಅಸಮಾನತೆಯ ಅತಿದೊಡ್ಡ ಹೆಚ್ಚಳವಾಗಿದೆ".

ವಿಧಾನ ಪರಿಷತ್ತಿನ ಸಭಾಪತಿಗಳಾದ ಹೊರಟ್ಟಿಯವರು ಈಗ ತಾವಿರುವ ಸ್ಥಾನದಲ್ಲಿ ಪಕ್ಷಾತೀತರಾಗಿರಬೇಕು.

ಆದರೆ ಈಗಿನ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು ಈ ಎಲ್ಲಾ ನೀತಿಸಂಹಿಗಳನ್ನು ಗಾಳಿಗೆ ತೂರಿ ಬಿಜೆಪಿ ಪಕ್ಷದ ಮುಖಂಡ ಮತ್ತು ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ರನ್ನು ಭೇಟಿಯಾಗಿ ಬಿಜೆಪಿ ಪಕ್ಷ ಸೇರುವುದಾಗಿ ಘೋಷಿಸಿದ್ದಾರೆ. ಆ ಮೂಲಕ ಕೆಟ್ಟ ನಡಾವಳಿಯನ್ನು ಪ್ರದರ್ಶಿಸಿದ್ದಾರೆ. ಈ ಅಸಂವಿಧಾನಿಕ ನಡೆಗಳನ್ನು ಪ್ರಶ್ನಿಸುವವರೂ ಯಾರೂ ಇಲ್ಲದಂತಾಗಿದೆ.

ಈಗ ಇವರು ಮಕ್ಕಳ ಹಿತಾಸಕ್ತಿಯನ್ನು ಎತ್ತಿಹಿಡಿಯುವ ಬದಲು ಬೇಸಿಗೆ ಇರುವುದರಿಂದ ಮೇ 15ರಿಂದ ಶಾಲೆಗಳನ್ನು ಪ್ರಾರಂಭಿಸಬಾರದೆಂದು ಹೇಳಿಕೆ ಕೊಟ್ಟಿದ್ದಾರೆ. ಇದು ಸಹ ಬೇಜವಾಬ್ದಾರಿ ಹೇಳಿಕೆ.ಕಳೆದ ಎರಡು ವರ್ಷಗಳ ಕೋವಿಡ್ ಕಾರಣದಿಂದ ಕಲಿಕಾ ಅಂತರ (learning gap) ಹೆಚ್ಚಾಗಿದೆ ಕಲಿಕೆಯ ನಷ್ಟಕ್ಕೆ ( learning loss) ಕಾರಣವಾಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.ಇದನ್ನು ಸರಿದೂಗಿಸಲು ಮೇ ೧೬ ರಂದು ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿ ಸುತ್ತೋಲೆ ಹೊರಡಿಸಿರುವುದು ಸರಿ ಇದೆ . ಈ ನಿರ್ಧಾರವನ್ನು ನಮ್ಮ ವೇದಿಕೆ ಸ್ವಾಗತಿಸುತ್ತದೆ.

ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು ಈ ರೀತಿ ಹೇಳಿಕೆ ನೀಡಲು ಪ್ರಮುಖ ಕಾರಣವೆಂದರೆ ಜೂನ್ ೨೦೨೨ ಕ್ಕೆ ಪಶ್ಚಿಮ ಪದವೀಧರರ ಶಿಕ್ಷಕರ ಚುನಾವಣೆ ನಡೆಯುತ್ತದ್ದು , ಈ ಕ್ಷೇತ್ರದಿಂದ ಸ್ಪರ್ಧಿಸಿರುವ ಅವರು ಸ್ಪರ್ಧಿಸುತ್ತಿದ್ದಾರೆ . ಅವರ ಜೊತೆ ಮತ್ತೊಬ್ಬ ಸದಸ್ಯರಾದ ಅರುಣ್ ಶಹಾಪುರರವರು ಮತ್ತೊಂದು ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ . ಈ ಕಾರಣದಿಂದ ಶಿಕ್ಷಕರನ್ನು ಓಲೈಸಲು ಮತ್ತು ಚುನಾವಣೆ ಪ್ರಚಾರಕ್ಕೆ ಶಿಕ್ಷಕರನ್ನು ಬಳಸಿಕೊಳ್ಳುವ ಇರಾದೆಯಿಂದಾಗಿ ಮೇ 15ರಿಂದ ಶಾಲೆಗಳ ಪ್ರಾರಂಭಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಇಬ್ಬರೂ ಆಳುವ ಪಕ್ಷದವರಾಗಿದ್ದು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸರಕಾರದ ಮೇಲೆ ಪ್ರಭಾವ ಬೀರುವುದು ನಿಜಕ್ಕೂ ಅನೈತಿಕವಾಗಿದೆ .

ಈ ಎಲ್ಲ ಕಾರಣಗಳಿಂದ, ಸರ್ಕಾರವು ಈಗಾಗಲೇ ನಿಗದಿಗೊಳಿಸಿರುವಂತೆ , ಮೇ ೧೬ರಂದು ಶಾಲೆಗಳನ್ನು ಪುನಾರಾರಂಭಿಸಬೇಕೆಂದು ನಮ್ಮ ಸಮನ್ವಯ ವೇದಿಕೆ ಒತ್ತಾಯಿಸುತ್ತದೆ.

ವಂದನೆಗಳೊಂದಿಗೆ

ಅಧ್ಯಕ್ಷರು

ತಮ್ಮ ವಿಶ್ವಾಸಿಗಳಾದ ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ

| | |
|---|---|
| ಬಿ.ಎಸ್. ಯೋಗಾನಂದ | – ಆರ್‌ಟಿಇ ಸ್ಥೂಪ – 8884676944 |
| ಕೇಸರೀ ಹರವು | – ಕರ್ನಾಟಕ ಪೋಷಕರ ವೇದಿಕೆ– 9448772067 |
| ಚಿದಾನಂದ | – ಸ್ವಾಮಿ ವಿವೇಕಾನಂದ ಮಕ್ಕಳ ಹಾಗೂ ಪೋಷಕರ ಕ್ಷೇಮಾಭಿವೃದ್ಧಿ ಸಂಘ– 9880092628 |
| ಭಾಸ್ಕರ್ ರೆಡ್ಡಿ | – ಕರ್ನಾಟಕ ಸ್ಟೂಡೆಂಟ್ಸ್ ಅಂಡ್ ಪೇರೆಂಟ್ಸ್ ಫೋರಂ (ಕೆಎಸ್‌ಪಿಎಫ್) – 9036009292 |
| ವಾಣಿ | – ಬಲ್ಡ್ವಿನ್ ಕೋ ಎದುಕೇಶನ್ ಸ್ಕೂಲ್ – 9448325478 |
| ಚೈತ್ರ | – ಪ್ರೆಸಿಡೆನ್ಸಿ ಸ್ಕೂಲ್ ಪೇರೆಂಟ್ ಅಸೋಸಿಯೇಷನ್– 9886383511 |
| ಗಣೇಶ್ ಪೂಜಾರಿ | – ನ್ಯಾಷನಲ್ ಪಬ್ಲಿಕ್ ಸ್ಕೂಲ್ – 9986673267 |
| ಮೂರ್ತಿ | – ಸಮಾನ ಮನಸ್ಕ ಪೋಷಕರ ಧ್ವನಿ – 8147665141 |
| ಶೃಂಗೇರಿ ಕುಮಾರ್ | – ದಿ ನ್ಯೂ ಕೇಂಬ್ರಿಡ್ಜ್ ಇಂಗ್ಲೀಷ್ ಸ್ಕೂಲ್ |
| ರುದ್ರೇಶ್ ಟಿ | – ನಾಡಪ್ರಭು ಕೆಂಪೇಗೌಡ ಪೋಷಕರ ವೇದಿಕೆ |
| ಮಮತಾ | – ಚೈತನ್ಯ ಈಟೆಕ್ನೋ ಸ್ಕೂಲ್ ಮಹಾಲಕ್ಷ್ಮಿಲೇಔಟ್ |
| ಶಂಕರ್ | – ಸೌಂದರ್ಯ ಸ್ಕೂಲ್ ನಾಗಸಂದ್ರ |
| ಸುರೇಶ್ | – ಚೈತನ್ಯ ಈಟೆಕ್ನೋ ಸ್ಕೂಲ್ ರಾಜಾಜಿನಗರ |
| ಎಂ ಜೆ ಸತೀಶ್ | – ವೀಡಿಯಾ ಪೂರ್ಣ ಪ್ರಜ್ಞ ಸ್ಕೂಲ್ ದಾಸರಹಳ್ಳಿ |
| ಶಿಲ್ಪ | – ನಾರಾಯಣ ಒಲಿಂಪಿಯಾಡ್ ಸ್ಕೂಲ್ ಸಹಕಾರನಗರ |
| ಸಂತೋಷ್ | – ಎನ್ ಪಿ ಎಸ್ ಬನಶಂಕರಿ – 9620203151 |
| ದೀಪಿಕಾ | – ನಾರಾಯಣ ಈ ಟೆಕ್ನೋ ಸ್ಕೂಲ್– 8123239260 |
| ಮೋಹನ್ | - ಅಮೃತ ಚಿಲ್ಡ್ರನ್ಸ್ ವೆಲ್ಫೇರ್ ಅಸೋಸಿಯೇಷನ್- 9980880712 |
| ವಿಜಯ ಬಸೇಟಿಯ | – ಆರ್ಕಿಡ್ ಇಂಟರ್ನ್ಯಾಷನಲ್ ಸ್ಕೂಲ್ ಸಿವಿ ರಾಮನ್ ನಗರ |
| ರಾಕೇಶ್ | – ಮೌಂಟ್ ಲಿತೆರಾ ಜೀ ಸ್ಕೂಲ್ |